ಡಿ ಡಬ್ಲ್ಯೂ ಃ 1

ದಿನಾಂಕ 18-04-2019 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಸ್ ವಿ ಟಿ ವಕೀಲರಿಂದಃ

ನನ್ನ ತಂದೆಗೆ ಒಟ್ಟು 3 ಜನ ಮಕ್ಕಳು. 1ನೇ ಪ್ರತಿವಾದಿ ಹಾಗೂ ನಾವುಗಳು ಸೇರಿ ಕುಟುಂಬದ ನಿರ್ವಹಣೆ ಮಾಡುತ್ತಿದ್ದೇವೆ. ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ. ನಾನು 1 ರಿಂದ 3ನೇ ಪ್ರತಿವಾದಿಗಳು ಸುಮಾರು 30 ವರ್ಷಗಳಿಂದ ಪ್ರತ್ಯೇಕ ವಾಸವಾಗಿದ್ದೇವೆ. ಆ ಸಂಬಂದ ದಾಖಲೆಯನ್ನು ಸಲ್ಲಿಸಿಲ್ಲ. ಸರ್ವೆ ನಂ.2 ರ ಒಟ್ಟು ವಿಸ್ತೀರ್ಣ 9 ಎಕರೆ. ಸರ್ವೆ ನಂ.2/1 ರಿಂದ 2/3 ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನಿಪಿ 1 ರಲ್ಲಿರುವ ಎಂಟ್ರಿ ಸರಿ•ಯಾಗಿದೆ ಎಂದರೆ ಸರಿ. ನಿಪಿ 1 ರಲ್ಲಿ ನಮೂದಿಸಿದ ವ್ಯಕ್ತಿ ನನ್ನ ಸಂಬಂಧಿಕರಲ್ಲ. ಸ್ವಾಧೀನದ ಆಧಾರದ ಮೇಲೆ ನಿಪಿ 1 ರ ಮೇಲೆ ಎಂಟ್ರಿ ಮಾಡಲಾಗಿದೆ ಎಂದರೆ ಸರಿ. 1947-48 ರಲ್ಲಿ ಹಿರಿಯಪ್ಪ, ಗೋಣೆಪ್ಪ, ಕರಿಹನುಮಪ್ಪ ಎನ್ನುವವರು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಹಿಸ್ಸೆಯ ಆಧಾರದಂತೆ ಕಂದಾಯದ ದಾಖಲೆಗಳಲ್ಲಿ ಎಂಟ್ರಿ•ಯಾಗಿದೆ ಎಂದರೆ ಸುಳ್ಳು. ವಾದಿಗಳು ಗೋಣೆಪ್ಪ ಉಪ್ಪಾರ ಇವರ ಮಕ್ಕಳು ಎಂದರೆ ಸರಿ. 1931-32 ರಿಂದ ವಾದಿ ಹಾಗೂ ಅವರ ತಂದೆ ದಾವಾ ಆಸ್ತಿಯ ಸ್ವಾಧೀನದಾರರು ಎಂದರೆ ಸರಿಯಲ್ಲ. 2005 ರಲ್ಲಿ ಭೂ ನ್ಯಾಯ ಮಂಡಳಿಗೆ ಅರ್ಜಿ ನೀಡಿದ್ದೇನೆ. ಆ ಸಮಯದಲ್ಲಿ ವಾದಿಗಳು ದಾವಾದಾಸ್ತಿಯ ಸ್ವಾಧೀನದಲ್ಲಿದ್ದರು, ದಾವಾದಾಸ್ತಿಯನ್ನು ಅಳತೆ ಮಾಡಿಸಿದ್ದೀರಾ ಎಂದರೆ ಸಾಕ್ಷಿ ವಾದಿಗಳು ದಾವಾದಾಸ್ತಿಯ ಸ್ವಾಧೀನದಾರರಲ್ಲ ಎನ್ನುತ್ತಾರೆ. ಭೂ ನ್ಯಾಯ ಮಂಡಳಿಯಿಂದ •ಯಾವುದೇ ನೋಟೀಸ್ ಬಂದಿಲ್ಲ. ವಾದಿಗಳು, ಅವರ ತಂದೆ ದಾವಾದಾಸ್ತಿಯ ಸ್ವಾಧೀನವನ್ನು ನಿಮಗೆ ನೀಡಿದ್ದಾರಾ ಎಂದರೆ ಸಾಕ್ಷಿ ದಾವಾದಾಸ್ತಿ ಅಸ್ಥಿತ್ವದಲ್ಲಿ ಇಲ್ಲ ಎನ್ನುತ್ತಾರೆ.ವಾದಿಗಳೇ ದಾವಾ ಆಸ್ತಿಯ ಸ್ವಾಧೀನದಾರರು, ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ವಾದಿಗಳಿಗೆ ತಿಳಿಯದ ಹಾಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾತಿ ಆದೇಶ ಪಡೆದಿದ್ದೀರಿ ಎಂದರೆ ಸರಿಯಲ್ಲ. ವಾದಿಗಳೇ ದಾವಾದಾಸ್ತಿಯ ಸ್ವಾಧೀನದಾರರು ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸ್ವಾಧೀನದ ಸಂಬಂದ ನಿಮ್ಮ ಹಾಗೂ ವಾದಿಗಳ ನಡುವೆ ವ್ಯಾಜ್ಯ ಇದೆ ಎಂದರೆ •ಯಾವುದೇ ಜಗಳ ಮಾಡಿಲ್ಲ ಎನ್ನುತ್ತಾರೆ. ವಾದಿಗಳ ಸ್ವಾಧೀನಕ್ಕೆ ತೊಂದರೆಪಡಿಸಿದ ಕಾರಣ ದಾವೆ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ವಾದಿಗಳಿಗೆ ಆಸ್ತಿ ಇಲ್ಲ ಎನ್ನುತ್ತಾರೆ. ನಿಮ್ಮ ಹಾಗೂ ವಾದಿಗಳ ನಡುವೆ 1 ಎಕರೆ ಜಮೀನಿನ ಸಂಬಂದ ವ್ಯಾಜ್ಯ ಇದೆ ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸರಿ. ಸದರಿ ವಿಸ್ತೀರ್ಣದಲ್ಲಿ ಸದರಿ ಜಮೀನಿನ ಸಂಬಂದ ವಾದಿಗಳು ನಿಮ್ಮ ವಿರುದ್ದ ಆದೇಶ ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿ ನಮ್ಮ ಜಾಗದಲ್ಲಿ ನಾವು

ಡಿ ಡಬ್ಲ್ಯೂ : 1

ಮನೆ ಕಟ್ಟುತ್ತಿದ್ದೇವೆ ಎನ್ನುತ್ತಾರೆ. ಸದರಿ ದಾವೆಯಲ್ಲಿನ ಆಸ್ತಿ ಹಾಗೂ ಈ ದಾವೆಯ ಆಸ್ತಿ ಬೇರೆ ಬೇರೆ ಎಂದರೆ ಸರಿ. ಸದರಿ ದಾವೆಯಲ್ಲಿನ ಆಸ್ತಿಯೇ ಈ ದಾವೆಯ ಆಸ್ತಿ ಎಂದು ತಪ್ಪು ತಿಳುವಳಿಕೆಯಿಂದ ಪ್ರತಿವಾದ ಪತ್ರ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ವಾದಿಗಳೇ ದಾವಾದಾಸ್ತಿಯ ಮಾಲೀಕರು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ.

ಸಹಿ

ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.